## ಎಸ್‌ಬಿಐ ಲೈಫ್ - ಶುಭ ನಿವೇಶ್ ಏಕೆ ಬೇಕು?

ನಿಮ್ಮ ಕುಟುಂಬದ ಗುರಿಗಳನ್ನು ತಲುಪುವುದು, ಬೆಳೆಯುತ್ತಿರುವ ನಿಮ್ಮ ಜೀವನ ಶೈಲಿಯ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ನಿಮ್ಮ ಪ್ರಿಯ ಜನರನ್ನು ಸಂರಕ್ಷಿಸುವುದು, ಇವು ಯಾವಾಗಲೂ ನಿಮ್ಮ ಆದ್ಯತೆಯಾಗಿವೆ. ಈಗ ಎಸ್‌ಬಿಐ ಲೈಫ್ - ಶುಭ ನಿವೇಶ್‌ನೊಂದಿಗೆ ನಾಳಿನ ಭವಿಷ್ಯವನ್ನು ಸುನಿಶ್ಚಿತಗೊಳಿಸುವ ಆನಂದ ಪಡೆಯಿರಿ, ಇದು ಜೀವನಕ್ಕಾಗಿ ಒಂದು ಸುಭದ್ರವಾದ ಆರ್ಥಿಕ ಕಾರ್ಪಸ್‌ನ್ನು ರಚಿಸಲು ನಿಮಗೆ ಸಂರಕ್ಷಣೆ, ಉಳಿತಾಯ ಮತ್ತು ನಿಯಮಿತ ಆದಾಯವನ್ನು ಒದಗಿಸುತ್ತದೆ. **ಎಸ್‌ಬಿಐ ಲೈಫ್ - ಶುಭ ನಿವೇಶ್** ಇದು ಹೋಲ್ ಲೈಫ್ ಇನ್‌ಶೂರೆನ್ಸ್‌ನ ವಿಕಲ್ಪದೊಂದಿಗಿನ ಒಂದು ವ್ಯಕ್ತಿಗತ, ನಾನ್-ಲಿಂಕ್ಡ್, ಪಾರ್ಟಿಸಿಪೇಟಿಂಗ್, ಲೈಫ್ ಇನ್‌ಶೂರೆನ್ಸ್ ಉಳಿತಾಯ ಉತ್ಪನ್ನವಾಗಿದೆ.

## ಪ್ರಮುಖ ವಿಶೇಷತೆಗಳು

- ನಿಮ್ಮ ಕುಟುಂಬಕ್ಕೆ **ಸುರಕ್ಷತೆ,** ಸಂಪತ್ತಿನ ಸೃಷ್ಟಿ ಮತ್ತು ನಿಯಮಿತ ಆದಾಯದ ಹರಿವು
- **ಹೋಲ್ ಲೈಫ್ ಇನ್‌ಶೂರೆನ್ಸ್** ಪಡೆಯುವ ಆಯ್ಕೆ ಇದ್ದು, ಇದು ಪರಿಪಕ್ವತೆಯ ನಂತರ ಜೀವ ವಿಮೆ ಮಾಡಿಸಿಕೊಂಡವರ ಮೃತ್ಯು ಸಂಭವಿಸಿದಲ್ಲಿ ಹೆಚ್ಚುವರಿ ಮೂಲ ವಿಮಾ ಮೊತ್ತವನ್ನು ಒದಗಿಸುತ್ತದೆ
- **ಎರಡು ಪ್ಲಾನ್ ಆಯ್ಕೆಗಳು :** ನಿಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಒಂದು ಪ್ಲಾನ್ ಆಯ್ಕೆಯನ್ನು ಆರಿಸಿಕೊಳ್ಳಿ
  - ಎಂಡೋಮೆಂಟ್ ಆಯ್ಕೆ : ವಿಮೆ ಮತ್ತು ಉಳಿತಾಯಗಳನ್ನು ಒದಗಿಸುತ್ತದೆ
  - ಹೋಲ್ ಲೈಫ್ ಆಯ್ಕೆಯೊಂದಿಗೆ ಎಂಡೋಮೆಂಟ್ : ಎಂಡೊಮೆಂಟ್ ವಿಕಲ್ಪದಡಿಯಲ್ಲಿ ನಮೂದಿಸಲಾದಂತೆ ಲಾಭಗಳಿಗೆ ಹೆಚ್ಚುವರಿಯಾಗಿ 100 ವರ್ಷಗಳ ವಯಸ್ಸಿನ ತನಕ ನಿಮ್ಮ ಜೀವನ ಸುರಕ್ಷೆಯನ್ನು ವಿಸ್ತರಿಸಿರಿ
- ಸಿಂಗಲ್ ಅಥವಾ ನಿಯಮಿತ ಪ್ರೀಮಿಯಮ್ ಪಾವತಿಯ **ಆಯ್ಕೆ**
- **ನಿಯಮಿತ ಆದಾಯ :** ಪರಿಪಕ್ವತೆಯ ನಂತರ 5/10/15/20 ವರ್ಷಗಳ ಅವಧಿಯಲ್ಲಿ ನಿಯಮಿತ ಮಧ್ಯಂತರಗಳಲ್ಲಿ ಮೂಲ ವಿಮಾ ಮೊತ್ತವನ್ನು ಪಡೆಯುವ ಆಯ್ಕೆ
- **ರೈಡರ್‌ಗಳ ಮೂಲಕ** ಕೈಗೆಟಕುವ ವೆಚ್ಚದಲ್ಲಿ **ಹೆಚ್ಚುವರಿ ಸಂರಕ್ಷಣೆ**


## ನಮೂನೆ ವಿವರಣೆ

| ಎಸ್‌ಬಿಐ ಲೈಫ್ - ಶುಭ ನಿವೇಶ್ | | |
|---|---|---|
| ವಿಮೆ ಮಾಡಿಸಿಕೊಂಡವರ ವಯಸ್ಸು : 35 ವರ್ಷಗಳು | ಪ್ರೀಮಿಯಮ್‌ನ ಆವರ್ತನ : ವಾರ್ಷಿಕ | ಪಾಲಿಸಿ ಅವಧಿ : 25 ವರ್ಷಗಳು |
| ಮೂಲ ವಿಮಾ ಮೊತ್ತ : ₹20,00,000 | ವಾರ್ಷಿಕ ಪ್ರೀಮಿಯಂ : ₹89,160 (ಅನ್ವಯವಾಗುವ ಕರಗಳ ಹೊರತಾಗಿ) | ಪ್ಲಾನ್ ಆಯ್ಕೆ : ಹೋಲ್ ಲೈಫ್ ಜೊತೆಗೆ ಎಂಡೋಮೆಂಟ್ |

**ಪರಿಪಕ್ವತೆಯ ಲಾಭ :** ರಾಮ್ ತನ್ನ 100ನೇ ವಯಸ್ಸಿನ ತನಕ ಬದುಕಿದರೆ, ಆಗ ಎಂಡೋಮೆಂಟ್ ಅವಧಿಯ ಕೊನೆಯಲ್ಲಿ, ಅಂದರೆ 25 ವರ್ಷಗಳಲ್ಲಿ ಅವನು ವಿವರಣೆಯಲ್ಲಿ ನಮೂದಿಸಲಾದಂತೆ ಲಾಭ 1ನ್ನು ಪರಿಪಕ್ವತೆಯ ಲಾಭವಾಗಿ ಮತ್ತು 100 ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದಾಗ ಅವನು ಲಾಭ 2ರಂತೆ ಪರಿಪಕ್ವತೆಯ ಲಾಭವಾಗಿ ಹೆಚ್ಚುವರಿ ಮೂಲ ವಿಮಾ ಮೊತ್ತವನ್ನು ಪಡೆಯುತ್ತಾನೆ.


ಲಾಭ 1 : ಪರಿಪಕ್ವತೆಯ ಲಾಭ^^ವು ಮೂಲ ವಿಮಾ ಮೊತ್ತ + ವೆಸ್ಟೆಡ್‌ಸಿಂಪಲ್ ರಿವರ್ಷನರಿ ಬೋನಸ್‌ಗಳು + ಟರ್ಮಿನಲ್ ಬೋನಸ್, ಏನಾದರೂ ಇದ್ದರೆ @4%: ₹26,90,000 @8%: ₹44,72,500

ಲಾಭ 2 : ₹20 ಲಕ್ಷದ ಹೆಚ್ಚುವರಿ ಮೂಲ ವಿಮಾ ಮೊತ್ತ




### ಪರಿದೃಶ್ಯ 1

**ಮೃತ್ಯು ಲಾಭ :** ಅ) ಎಂಡೋಮೆಂಟ್ ಅವಧಿಯ ಕಾಲದಲ್ಲಿ 55 ವರ್ಷಗಳ ವಯಸ್ಸಿನಲ್ಲಿ ರಾಮ್‌ನ ಮೃತ್ಯು ಸಂಭವಿಸಿದರೆ, ಆಗ ನಾಮನಿರ್ದೇಶಿತರು/ಫಲಾನುಭವಿಯು ವಿವರಣೆಯಲ್ಲಿ ನಮೂದಿಸಲಾದಂತೆ ಪರಿದೃಶ್ಯ 2 ರಂತೆ ಮೃತ್ಯು ಲಾಭವನ್ನು ಪಡೆಯುತ್ತಾರೆ.




### ಪರಿದೃಶ್ಯ 1

**ಮೃತ್ಯು ಲಾಭವು** ಈ ಕೆಳಗಿನವುಗಳ ಪೈಕಿ ಅಧಿಕವಾಗಿರುವಂತಹದ್ದಾಗಿದೆ :


ಅ) ಮೃತ್ಯುವಿನಲ್ಲಿ ವಿಮಾ ಮೊತ್ತ + ವೆಸ್ಟೆಡ್ ಸಿಂಪಲ್ ರಿವರ್ಷನರಿ ಬೋನಸ್‌ಗಳು + ಟರ್ಮಿನಲ್ ಬೋನಸ್, ಏನಾದರೂ ಇದ್ದರೆ. ಇಲ್ಲಿ ಮೃತ್ಯುವಿನಲ್ಲಿ ವಿಮಾ ಮೊತ್ತವು ಮೂಲ ವಿಮಾ ಮೊತ್ತ ಅಥವಾ ವಾರ್ಷಿಕೀಕೃತ ಪ್ರೀಮಿಯಮ್‌ನ[$] 10 ಪಟ್ಟುಗಳು, ಇವುಗಳ ಪೈಕಿ ಅಧಿಕ ಇರುವಂತಹದ್ದಾಗಿದೆ.

ಆ) ಮೃತ್ಯುವಿನ ತಾರೀಖಿನ ತನಕ ಸ್ವೀಕರಿಸಲಾದ[@] ಒಟ್ಟು ಪ್ರೀಮಿಯಂನ 105%.

*[$]ವಾರ್ಷಿಕ ಪ್ರೀಮಿಯಮ್ ಎಂದರೆ, ಅನ್ವಯವಾಗುವ ತೆರಿಗೆಗಳು, ರೈಡರ್ ಪ್ರೀಮಿಯಮ್‌ಗಳು, ಅಂಡರ್‌ರೈಟಿಂಗ್ ಹೆಚ್ಚುವರಿ ಪ್ರೀಮಿಯಮ್‌ಗಳು ಮತ್ತು ಮೊಡೆಲ್ ಪ್ರೀಮಿಯಮ್‌ಗಳಿಗಾಗಿ ಲೋಡಿಂಗ್ಸ್, ಏನಾದರೂ ಇದ್ದರೆ, ಇವನ್ನು ಹೊರತುಪಡಿಸಿ ಪಾಲಿಸಿದಾರರಿಂದ ಆಯ್ಕೆ ಮಾಡಲಾದಂತೆ ಒಂದು ವರ್ಷದಲ್ಲಿ ಪಾವತಿಸಲಾಗುವ ಪ್ರೀಮಿಯಮ್ ಮೊತ್ತವಾಗಿದೆ.*

*[@]ಸ್ವೀಕರಿಸಲಾದ ಒಟ್ಟು ಪ್ರೀಮಿಯಮ್‌ಗಳು ಎಂದರೆ, ಯಾವುದೇ ಹೆಚ್ಚುವರಿ ಪ್ರೀಮಿಯಮ್, ಯಾವುದೇ ರೈಡರ್ ಪ್ರೀಮಿಯಮ್ ಮತ್ತು ತೆರಿಗೆಗಳನ್ನು ಹೊರತುಪಡಿಸಿ ಸ್ವೀಕರಿಸಲಾದ ಎಲ್ಲಾ ಪ್ರೀಮಿಯಮ್‌ಗಳ ಒಟ್ಟು ಮೊತ್ತವಾಗಿದೆ.*

ಆ) ರಾಮ್ ಎಂಡೋಮೆಂಟ್ ಅವಧಿಯ ನಂತರ 80ನೇ ವರ್ಷ ವಯಸ್ಸಿನಲ್ಲಿ ಮೃತರಾದರೆ, ಆಗ ರಾಮ್ ಲಾಭ 1 ರಂತೆ ಪಡೆದ ಪರಿಪಕ್ವತೆಯ ಲಾಭಕ್ಕೆ ಹೆಚ್ಚುವರಿಯಾಗಿ ಅವನ ನಾಮನಿರ್ದೇಶಿತರು/ಫಲಾನುಭವಿಯು ಈ ಕೆಳಗಿನ ವಿವರಣೆಯಂತೆ ಪರಿದೃಶ್ಯ 3 ರಂತೆ ಮೃತ್ಯು ಲಾಭವನ್ನು ಕೂಡಾ ಪಡೆಯುತ್ತಾರೆ.




^^ಪರಿಪಕ್ವತೆಯ ಲಾಭಗಳ ಅಂಕೆ ಸಂಖ್ಯೆಗಳು ಉದಾಹರಣೆಯ ಉದ್ದೇಶಗಳಿಗಾಗಿ ಮತ್ತು ಆರೋಗ್ಯವಂತ ಜೀವನಕ್ಕಾಗಿ. ಈ ಮೇಲೆ ನಮೂದಿಸಲಾದ ವಾರ್ಷಿಕ @4% ಮತ್ತು @8%ರ ಊಹಿಸಲಾದ ಪ್ರತಿಫಲದ ದರಗಳು ಅನ್ವಯವಾಗುವ ಎಲ್ಲಾ ಶುಲ್ಕಗಳನ್ನು ಪರಿಗಣಿಸಿದ ನಂತರ ಈ ದರಗಳ ಕೇವಲ ವಿವರಣಾತ್ಮಕ ಪರಿದೃಷ್ಯಗಳಾಗಿವೆ. ಬೋನಸ್ ದರಗಳು ಬೋನಸ್ ಸಂಚಯದ ಕಾಲಾವಧಿಯಲ್ಲಿ ಸ್ಥಿರವಾಗಿವೆ ಎಂದು ಊಹಿಸಲಾಗಿದೆ ಆದರೆ ಕಂಪೆನಿಯ ವಿನಿಯೋಜನೆಯ ಅನುಭವವನ್ನು ಆಧರಿಸಿ ವಾಸ್ತವಿಕ ಬೋನಸ್‌ನಲ್ಲಿ ವ್ಯತ್ಯಾಸವಾಗಬಹುದು. ಇವುಗಳ ಗ್ಯಾರಂಟಿ ನೀಡಲಾಗುವುದಿಲ್ಲ ಮತ್ತು ಇವು ಪ್ರತಿಫಲಗಳ ಮೇಲಿನ ಅಥವಾ ಕೆಳಗಿನ ಮಿತಿಗಳಲ್ಲ, ಪ್ರತಿಫಲಗಳು ಭವಿಷ್ಯದ ವಿನಿಯೋಜನೆಯ ಕಾರ್ಯಾಚರಣೆಯನ್ನೊಳಗೊಂಡು ಅನೇಕ ಅಂಶಗಳನ್ನು ಅವಲಂಬಿಸಿದೆ. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಿಮ್ಮ ಪಾಲಿಸಿಗೆ ನಿರ್ದಿಷ್ಟವಾದ ಲಾಭದ ವಿವರಣೆಯನ್ನು ಕೇಳಿರಿ.

## ಎಸ್‌ಬಿಐ ಲೈಫ್ – ಶುಭ ನಿವೇಶ್ ಒಂದು ಪಕ್ಷಿನೋಟ

| | | |
|---|---|---|
| **ಪ್ರವೇಶದಲ್ಲಿ ವಯಸ್ಸು**** | **ಕನಿಷ್ಠ:** 18 ವರ್ಷಗಳು | **ಗರಿಷ್ಠ: ಎಂಡೋಮೆಂಟ್ ಆಯ್ಕೆ**<br>ನಿಯಮಿತ ಪಾವತಿ (ಆರ್‌ಪಿ) : 55 ವರ್ಷಗಳು<br>ಏಕ ಪಾವತಿ (ಎಸ್‌ಪಿ) : 60 ವರ್ಷಗಳು<br>**ಹೋಲ್ ಲೈಫ್ ಆಯ್ಕೆಯೊಂದಿಗೆ ಎಂಡೋಮೆಂಟ್** : 50 ವರ್ಷಗಳು<br>(ಸಿಂಗಲ್/ರೆಗ್ಯುಲರ್ ಪ್ರೀಮಿಯಮ್ ಇವೆರಡಕ್ಕೂ) |
| **ಪಕ್ವತೆಯಲ್ಲಿ ಗರಿಷ್ಠ ವಯಸ್ಸು**** | 65 ವರ್ಷಗಳು | |
| **ಮೂಲ ವಿಮಾ ಮೊತ್ತ (₹1,000ದ ಗುಣಾಕಾರದಲ್ಲಿ)** | **ಕನಿಷ್ಠ:**₹75,000 | **ಗರಿಷ್ಠ:** ಮಿತಿ ಇಲ್ಲ, ಮಂಡಳಿಯಿಂದ ಅನುಮೋದಿತ ಅಂಡರ್‌ರೈಟಿಂಗ್ ಪಾಲಿಸಿಗೆ ಒಳಪಟ್ಟು |
| **ಪಾಲಿಸಿ ಅವಧಿ** | **ಕನಿಷ್ಠ: ಎಂಡೋಮೆಂಟ್ ಆಯ್ಕೆ**<br>10 (ಆರ್‌ಪಿ)/5 (ಎಸ್‌ಪಿ) ವರ್ಷಗಳು<br>**ಹೋಲ್ ಲೈಫ್ ಆಯ್ಕೆಯೊಂದಿಗೆ ಎಂಡೋಮೆಂಟ್**<br>15 ವರ್ಷಗಳು (ಎಸ್‌ಪಿ ಮತ್ತು ಆರ್‌ಪಿ ಇವೆರಡಕ್ಕೂ) | **ಗರಿಷ್ಠ:** 30 ವರ್ಷಗಳು<br>(ಎಂಡೋಮೆಂಟ್ ಅವಧಿ) |
| **ಪ್ರೀಮಿಯಮ್ ಆವರ್ತನ** | ಏಕ ಪಾವತಿ/ವಾರ್ಷಿಕ/ಅರ್ಧ-ವಾರ್ಷಿಕ/ತ್ರೈಮಾಸಿಕ/ಮಾಸಿಕ# | |
| **ಪ್ರೀಮಿಯಮ್ ಪಾವತಿಯ ಅವಧಿ** | ಏಕ ಪಾವತಿ/ನಿರಂತರ ಪಾವತಿ (ಪಾಲಿಸಿಯ ಅವಧಿಯಷ್ಟೇ ಕಾಲ) | |
| **ಪ್ರೀಮಿಯಮ್‌ನ ಆವರ್ತನ ತುಂಬುವಿಕೆ** | ಅರ್ಧ ವಾರ್ಷಿಕ : ವಾರ್ಷಿಕ ಪ್ರೀಮಿಯಮ್‌ನ 51.00%<br>ತ್ರೈಮಾಸಿಕ : ವಾರ್ಷಿಕ ಪ್ರೀಮಿಯಮ್‌ನ 26.00%<br>ಮಾಸಿಕ : ವಾರ್ಷಿಕ ಪ್ರೀಮಿಯಮ್‌ನ 8.50% | |
| **ಪ್ರೀಮಿಯಮ್** | **ಕನಿಷ್ಠ:** | **ಗರಿಷ್ಠ:** |
| | ಏಕ ಪಾವತಿ : ₹43,000<br>ವಾರ್ಷಿಕ : ₹6,000<br>ಅರ್ಧ-ವಾರ್ಷಿಕ : ₹3,000<br>ತ್ರೈಮಾಸಿಕ : ₹1,500<br>ಮಾಸಿಕ : ₹500 | ಮಿತಿ ಇಲ್ಲ, ಮಂಡಳಿಯಿಂದ ಅನುಮೋದಿತ ಅಂಡರ್‌ರೈಟಿಂಗ್ ಪಾಲಿಸಿಗೆ ಒಳಪಟ್ಟು |

**ವಯಸ್ಸಿನ ಎಲ್ಲಾ ವಿವರಗಳು ಹಿಂದಿನ ಜನನ ದಿನಾಂಕದ ಅನುಸಾರ.

#ಮಾಸಿಕ ವಿಧಾನಕ್ಕಾಗಿ, 3 ತಿಂಗಳವರೆಗೆ ಪ್ರೀಮಿಯಂನ್ನು ಮುಂದಾಗಿ ಪಾವತಿಸಬೇಕು ಮತ್ತು ನವೀಕರಣದ ಪ್ರೀಮಿಯಂ ಪಾವತಿ ಕೇವಲ ಇಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಮ್ (ಇಸಿಎಸ್) ಮೂಲಕ ಅಥವಾ ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ಸ್ (ಬ್ಯಾಂಕ್ ಅಕೌಂಟಿನಿಂದ ಡೈರೆಕ್ಟ್ ಡೆಬಿಟ್ ಮೂಲಕ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ).

ಮಾಸಿಕ ವೇತನ ಉಳಿತಾಯ ಯೋಜನೆ (ಎಸ್‌ಎಸ್‌ಎಸ್), 2 ತಿಂಗಳ ವರೆಗೆ ಪ್ರೀಮಿಯಂ ಮುಂದಾಗಿ ಪಾವತಿಸಿರಿ ಮತ್ತು ರಿನ್ಯುವಲ್ ಪ್ರೀಮಿಯಂ ಪಾವತಿಯನ್ನು ಕೇವಲ ಸಂಬಳದಿಂದ ಕಡಿದು ಪಾವತಿಸುವುದಕ್ಕೆ ಅನುಮತಿಯಿದೆ.

## ರಿಬೇಟ್‌ಗೆ (ಸೋಡಿಗೆ) ನಿಷೇಧ

**ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ವಿಮಾ ಕಾಯ್ದೆ, 1938ರ ಸೆಕ್ಷನ್ 41 ಹೇಳುವುದೇನೆಂದರೆ :**

ಅ) ವಿಮಾ ಸಂಸ್ಥೆಯ ಪ್ರಕಾಶಿತ ವಿವರಣಪತ್ರಗಳಿಗೆ ಅಥವಾ ಕೋಷ್ಟಕಗಳಿಗೆ ಅನುಗುಣವಾಗಿ ಅನುಮತಿ ಇರಬಹುದಾದ ಸೋಡಿಯನ್ನು (ರಿಬೇಟ್) ಹೊರತುಪಡಿಸಿ, ಭಾರತದಲ್ಲಿನ ವ್ಯಕ್ತಿಗಳಿಗೆ ಅಥವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಬಗೆಯ ಆಪತ್ತಿನ ವಿಚಾರದಲ್ಲಿ, ಯಾವುದೇ ವ್ಯಕ್ತಿಯು ಯಾವುದೇ ವ್ಯಕ್ತಿಗೆ ವಿಮೆಯನ್ನು ಪಡೆದುಕೊಳ್ಳಲು ಅಥವಾ ನವೀಕರಿಸಲು ಅಥವಾ ಮುಂದುವರಿಸಲು ಪ್ರಚೋದನೆಯ ರೂಪದಲ್ಲಿ, ನೇರವಾಗಿ ಅಥವಾ ಪರೋಕ್ಷವಾಗಿ, ಪಾವತಿಸಲ್ಪಡಬಹುದಾದ ಕಮಿಷನ್ ಹಣದ ಸಂಪೂರ್ಣ ಅಥವಾ ಭಾಗಶಃ ಯಾವುದೇ ಸೋಡಿಗೆ, ಅಥವಾ ಪಾಲಿಸಿಯಲ್ಲಿ ನಮೂದಿಸಲ್ಪಟ್ಟಿರುವ ಪ್ರೀಮಿಯಮ್‌ನ ಯಾವುದೇ ಸೋಡಿಗೆ ಅನುಮತಿ ಅಥವಾ ಆಸ್ಪದ ನೀಡಕೂಡದು ಮತ್ತು ಒಂದು ಪಾಲಿಸಿಯನ್ನು ಪಡೆದುಕೊಳ್ಳುತ್ತಿರುವ ಅಥವಾ ನವೀಕರಿಸುವ ಅಥವಾ ಮುಂದುವರಿಸುತ್ತಿರುವ ಯಾವುದೇ ವ್ಯಕ್ತಿಯು ಯಾವುದೇ ಸೋಡಿಯನ್ನು ಸ್ವೀಕರಿಸಕೂಡದು.

ಆ) ಈ ಸೆಕ್ಷನ್‌ನ ಪ್ರಾವಧಾನಗಳನ್ನು ಪಾಲಿಸದೇ ಇರುವ ಯಾವುದೇ ವ್ಯಕ್ತಿಯು ದಂಡಕ್ಕೆ ಅರ್ಹನಿದ್ದು ಇದು ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದು.


**Toll-free No.:** 1800 267 9090 | SMS '**LIBERATE**' to 56161 | **Email:** info@sbilife.co.in | **Web:** www.sbilife.co.in
(Between 9.00 am & 9.00 pm)


ಎಸ್‌ಬಿಐ ಲೈಫ್ – ಶುಭ ನಿವೇಶ್ ಇದು ಒಂದು ವ್ಯಕ್ತಿಗತ, ನಾನ್-ಲಿಂಕ್ಡ್, ಪಾರ್ಟಿಸಿಪೇಟಿಂಗ್, ಲೈಫ್ ಇನ್‌ಶೂರೆನ್ಸ್ ಉಳಿತಾಯ ಉತ್ಪನ್ನವಾಗಿದೆ.

**ನಕಲಿ/ಮೋಸದ ಕೊಡುಗೆಗಳಿಗೆ ಸಂಬಂಧಿಸಿದ ಫೋನ್ ಕರೆಗಳ ಕುರಿತು ಜಾಗರೂಕರಾಗಿರಿ.**
IRDAI ಇನ್‌ಶೂರೆನ್ಸ್ ಪಾಲಿಸಿಗಳನ್ನು ಮಾರಾಟ ಮಾಡುವುದು, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್ ಇನ್ವೆಸ್ಟ್‌ಮೆಂಟ್ ಮಾಡುವಂತಹ ಕೆಲಸಗಳಲ್ಲಿ ತೊಡಗಿರುವುದಿಲ್ಲ ಅಂತಹ ಕರೆಗಳು ಬಂದಲ್ಲಿ ಜನರು ಪೊಲೀಸರಿಗೆ ದೂರು ಸಲ್ಲಿಸಬೇಕಾಗಿ ವಿನಂತಿ.


ಅಪಾಯ ಅಂಶಗಳು, ನಿಯಮ ಮತ್ತು ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ಣಗೊಳಿಸುವ ಮೊದಲು ಸೇಲ್ಸ್ ಬ್ರೋಶರನ್ನು ಜಾಗ್ರತೆಯಿಂದ ಓದಿಕೊಳ್ಳಿರಿ. ರೈಡರ್ಸ್, ನಿಯಮ ಮತ್ತು ನಿಬಂಧನೆಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ರೈಡರ್ ಬ್ರೋಷರನ್ನು ನೋಡಿರಿ. ಈ ಮೇಲೆ ತೋರಿಸಲಾದ ವ್ಯಾಪಾರಿ ಲೋಗೋ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಸೇರಿದೆ ಮತ್ತು ಲೈಸನ್ಸ್ ನಡಿಯಲ್ಲಿ ಎಸ್‌ಬಿಐ ಲೈಫ್‌ನಿಂದ ಉಪಯೋಗಿಸಲಾಗುತ್ತಿದೆ. ಎಸ್‌ಬಿಐ ಲೈಫ್ ಇನ್‌ಶೂರೆನ್ಸ್ ಕಂ.ಲಿ., ರಿಜಿಸ್ಟರ್ಡ್ ಅಂಡ್ ಕಾರ್ಪೊರೇಟ್ ಆಫೀಸ್: ನಟ್‌ರಾಜ್, ಎಮ್.ವಿ. ರೋಡ್ ಅಂಡ್ ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ ಜಂಕ್ಷನ್, ಅಂಧೇರಿ (ಪೂರ್ವ), ಮುಂಬಯಿ–400069. **IRDAI ರಿಜಿಸ್ಟರ್ಡ್ ನಂ.111** | CIN:L99999MH2000PLC129113.
35/ver2/07/22/SP/KAN